ಆಧಾರಗಳು ಇಲ್ಲದಿದ್ದರಿಂದ ೧೭-೧೧-೧೯೮೭ ರಂದು 'ಬಿ' ಅಂತಿಮ ವರದಿಯನ್ನು ಕೊಟ್ಟು ತನಿಖೆಯನ್ನು ಮುಕ್ತಾಯ ಮಾಡಲಾಯಿತು. ಇದರ ಬಗ್ಗೆ ಕಾನೂನು ಪ್ರಕಾರ ಫಿರ್ಯಾದಿಗೆ ಸೂಚನೆಯನ್ನು ಕೊಡಲಾಗಿತ್ತು.

೪) ಮೇಲೆ ಹೇಳಿದಂತೆ ಈ ಎರಡು ನಿರ್ದಿಷ್ಟ ಪ್ರಕರಣಗಳಲ್ಲಿ ಸಾಕ್ಷ್ಯಾಧಾರಗಳು ಇಲ್ಲದಿದ್ದುದರಿಂದ ಪೋಲೀಸರು ಸೂಕ್ತ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ ಮತ್ತು ಈ ಕ್ರಮದಿಂದ ಅತೃಪ್ತಿ ಹೊಂದಿದ ಹಲವರು ಇದರ ಬಗ್ಗೆ ಅರ್ಜಿಗಳನ್ನು ಸಲ್ಲಿಸಿದ್ದು ಅವನ್ನು ಉನ್ನತ ಮಟ್ಟದಲ್ಲಿ ಪರಿಶೀಲಿಸಿ ಆ ದೂರಿನಲ್ಲಿ ಸತ್ಯಾಂಶಗಳು ಇಲ್ಲವೆಂದು ವರದಿಯಾಗಿದೆ.

೧-೦೦ ಪಿ. ಎಂ.

೧೨) ಬಳ್ಳಾರಿ ಜಿಲ್ಲೆಗೆ ಡಿ. ಸಿ. ಹೆಚ್. ೫೨ ಹತ್ತಿ ಬೀಜವನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಮನವಿ

ಶ್ರೀ ಸಿ. ಎಂ. ರೇವಣಸಿದ್ದಯ್ಯ.— ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಗೆ ಡಿ. ಸಿ. ಹೆಚ್. ೫೨ ಹತ್ತಿ ಬೀಜ ಕೇವಲ ೫೦ ಕ್ವಿಂಟಾಲ್ ಒದಗಿಸಿರುವುದು ಏನೂ ಸಾಲದು. ತುಂಗಭದ್ರ ಜಲಾಶಯದ ಅಡಿಯಲ್ಲಿ ವಾಂಗಾರಿ ಬೆಳೆಯಲ್ಲಿ ಸುಮಾರು ೬೦ ಸಾವಿರ ಎಕರೆ ಮತ್ತು ಮಳೆ ಆಸರೆಯಲ್ಲಿ ೩೦ ಸಾವಿರ ಎಕರೆ ಒಟ್ಟು ಸುಮಾರು ೯೦ ಸಾವಿರ ಎಕರೆಯಲ್ಲಿ ಡಿ. ಸಿ. ಹೆಚ್. ೫೨ ಹತ್ತಿ ಬೆಳೆ ಅನಿವಾರ್ಯ ಬೆಳೆ ಮಾಡುವುದುಂಟು. ೯೦ ಸಾವಿರ ಎಕರೆಗೆ ಕನಿಷ್ಠ ೬೦೦ ಕ್ವಿಂಟಾಲ್ ಹತ್ತಿ ಬೀಜದ ಅಗತ್ಯ ಇದೆ ಇಷ್ಟನ್ನು ಒದಗಿಸತಕ್ಕದ್ದು.

ಇದೇ ಸಂದರ್ಭದಲ್ಲಿ ಧಾರವಾಡ ಜಿಲ್ಲೆಗೆ ೫೦೦ ಕ್ವಿಂಟಾಲ್, ಚಿತ್ರದುರ್ಗಕ್ಕೆ ೨೦೦ ಕ್ವಿಂಟಾಲ್ ಡಿ. ಸಿ ಹೆಚ್. ೫೨ ಕೊಟ್ಟಿರುವುದು ಸರಿಯಷ್ಟೆ. ಇದೇ ಲೆಕ್ಕಾಚಾರದಲ್ಲಿ ಬಳ್ಳಾರಿಗೂ ಕನಿಷ್ಠ ೫೨೦ ಕ್ವಿಂಟಾಲ್ ಬೀಜವನ್ನಾದರೂ ಕೊಡಲು ಈ ಮೂಲಕ ಆಗ್ರಹ ಪಡಿಸುತ್ತೇನೆ. ಮಾನ್ಯ ಕೃಷಿ ಸಚಿವರು ಪರಿಶೀಲಿಸಿ ತೀರ್ಮಾನಿಸಲಿ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ಹಾಗೆ ಹತ್ತಿಗೆ ಬೆಳೆಗೆ ತೀರಾ ಹೆಚ್ಚು ದರ ಬಂದು ರಾಜ್ಯದ ಎಲ್ಲ ಭಾಗಗಳಲ್ಲಿ ರೈತರು ಹತ್ತಿ ಬೆಳೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ನಮ್ಮ ಬೀಜ ನಿಗಮದಿಂದ ಬೀಜದ ಕೊರತೆ ಇದೆ. ಅದು ನಿಜ. ಬಳ್ಳಾರಿ ಜಿಲ್ಲೆಗೆ ಕೇವಲ ೫೭ ಕ್ವಿಂಟಾಲ್ ಕೊಡಬೇಕಾಗಿದೆ ಆ ಪೈಕಿ ಅಲ್ಲಿಗೆ ೫೭.೬೨ ರಷ್ಟು ಅಲಾಟ್ ಮಾಡಿದ್ದೇವೆ. ಮಾನ್ಯ ರೇವಣಸಿದ್ದಯ್ಯನವರು ಹೇಳಿದ ಹಾಗೆ ಡಿಮಾಂಡ್ ಜಾಸ್ತಿ ಆದುದು ನಿಜ. ಆದುದರಿಂದ ಎಷ್ಟು ಬೀಜ ಹೆಚ್ಚು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬೇರೆ ಬೇರೆ ರಾಜ್ಯಗಳಿಂದ ಮಹಾರಾಷ್ಟ್ರ ಮತ್ತು ಗುಜರಾತ್ ನಿಂದ ಸರ್ಟಿಫೈಡ್ ಸೀಡ್ಸ್ ಬರಬೇಕಾಗಿದೆ. ಪ್ರೈವೇಟ್ ಕಂಪನಿಯವರಿಗೂ ಸಹ ಇದರ ಬಗ್ಗೆ ಪರವಾನಗಿಯನ್ನು ಕೊಟ್ಟಿದ್ದೇವೆ. ಅಲ್ಲಿಂದ ಸರ್ಟಿಫೈಡ್ ಸೀಡ್ಸ್ ಡಿ ಸಿ. ಹೆಚ್. ೫೨ ಬಂದ ನಂತರ ಬಳ್ಳಾರಿ ಜಿಲ್ಲೆಗೆ ಬೀಜವನ್ನು ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

೧೩) ಕೇರಳದ ಗಡಿಯಾದ ಮಾವುಕುಟ್ಟದಲ್ಲಿ ಗೇರು ಬೀಜ ವ್ಯಾಪಾರಕ್ಕೆ ಶೆಡ್ ಹಾಕಲು ಪರವಾನಿಗೆ ನೀಡುವ ಕುರಿತು

ಶ್ರೀ ಡಿ. ಎ ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕೇರಳದ ಗಡಿಯಾದ ಮಾವುಕುಟ್ಟದಲ್ಲಿ ಪ್ರತಿವರ್ಷ ಫೆಬ್ರುವರಿಯಿಂದ ಮೇ ತಿಂಗಳ ತನಕ ಗೇರು ಬೀಜ ವ್ಯಾಪಾರವಾಗುತ್ತದೆ. ಕೇರಳದಿಂದ ಬಂದ ಗೇರು ಬೀಜವನ್ನು ವ್ಯಾಪಾರಸ್ಥರು ಖರೀದಿ ಮಾಡಿ ತಮಿಳುನಾಡಿನಲ್ಲಿ ಮಾರಾಟ ಮಾಡುತ್ತಾರೆ. ಈತನಕ ಅಲ್ಲಿ ವ್ಯಾಪಾರ ಮಾಡಲು ಅರಣ್ಯ ಇಲಾಖೆಯ ಅಧಿಕಾರಿಯಾದ ಡಿ ಎಫ್. ಓ. ರವರು ಷೆಡ್ ಹಾಕಲು ಹುಕುಂ ಕೊಡುತ್ತಿದ್ದರು, ಈ ವ್ಯಾಪಾರಿಯಿಂದ ಕರ್ನಾಟಕ ಸರ್ಕಾರದಲ್ಲಿ ಸುಮಾರು ೮೦ ಲಕ್ಷದಿಂದ

ಒಂದು ಕೋಟಿ ರೂಪಾಯಿಗಳಷ್ಟು ತೆರಿಗೆ ಸೇಲ್ಸ್ ಟ್ಯಾಕ್ಸ್ ರೂಪದಲ್ಲಿ ಬರುತ್ತದೆ. ಈತನಕ ಅರಣ್ಯಾಧಿಕಾರಿಯಾದ ಡಿ. ಎಫ್. ಒ. ರವರು ಷೆಡ್ ಹಾಕಲು ಹುಕುಂ ಕೊಡುತ್ತಾ ಬರುತ್ತಿರುವರು. ಆದ್ರೆ ಈ ವರ್ಷ ಅರಣ್ಯ ಮತ್ತು ಕಾಮಗಾರಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಷೆಡ್ ಹಾಕಲು ಹುಕುಂ ಕೊಟ್ಟಿದ್ದಾರೆ. ಇದರಿಂದ ಈ ಎರಡು ಇಲಾಖೆಯಲ್ಲಿ ಒಳಜಗಳ ನಡೆಯುತ್ತಿದೆ. ಈ ಒಳ ಜಗಳದ ವಿಚಾರವನ್ನು ಕೂಡಲೇ ಪರಿಹರಿಸಿ ಇನ್ನು ಮುಂದೆ ಯಾರು ಷೆಡ್ ಹಾಕಲು ಹುಕುಂ ಕೊಡಬೇಕೆಂಬುದರ ಬಗ್ಗೆ ಸ್ಪಷ್ಟ ಪಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ರವೀಂದ್ರ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಕೇರಳ ರಾಜ್ಯದಲ್ಲಿ ಮುಖ್ಯವಾಗಿ ಕಣ್ಣಾನೂರು ಜಿಲ್ಲೆ, ಕರ್ನಾಟಕ ಮತ್ತು ಕೇರಳ ಗಡಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾಕಷ್ಟು ಗೇರು ಬೀಜದ ಬೆಳೆಯನ್ನು ಬೆಳೆಯಲಾಗಿದ್ದು, ಗೇರು ಬೀಜದ ಬೆಳೆಯು ಕೇರಳದಲ್ಲಿ ಕರ್ನಾಟಕಕ್ಕಿಂತ ಕಡಿಮೆ ಇದ್ದ ಕಾರಣ ಗೇರು ಬೀಜವನ್ನು ಕೇವು ವ್ಯಾಪಾರಸ್ಥರು ಶೇಖರಿಸಿ ಕರ್ನಾಟಕ ವಾಣಿಜ್ಯ ತೆರಿಗೆಯನ್ನು ಕೊಡದೆ ಕಳ್ಳತನದಿಂದ ಸಾಗಿಸುತ್ತಿದ್ದಾರೆ.

ಈ ರೀತಿ ಕೇರಳದಿಂದ ಕರ್ನಾಟಕ ಪ್ರದೇಶದ ಮುಖಾಂತರ ಗೇರು ಬೀಜವನ್ನು ಶೇಖರಿಸಿ ಸಾಗಿಸುತ್ತಿದ್ದುದನ್ನು ವಾಣಿಜ್ಯ ತೆರಿಗೆಯ ಇಲಾಖೆಯ ಅಧಿಕಾರಿಗಳು ಗಮನಿಸಿ, ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಅವರೊಡನೆ ಸಮಾಲೋಚನೆ ನಡೆಸಿ, ಕೇರಳ ಮತ್ತು ಕರ್ನಾಟಕ ರಾಜ್ಯದ ಗಡಿ ಪ್ರದೇಶವಾದ ಮಾವುಕೊಟ್ಟ ಎಂಬಲ್ಲಿ ರಸ್ತೆಯು ಇಕ್ಕೆಲಗಳಲ್ಲಿ ಅರಣ್ಯ ಪ್ರದೇಶದ ಜಾಗದಲ್ಲಿ ಈರೀತಿ ಗೇರುಬೀಜವನ್ನು ಕರ್ನಾಟಕ ಗಡಿಯಲ್ಲಿ ಶೇಖರಿಸಿಡಲು ಅರಣ್ಯ ಇಲಾಖೆಯವರು ತಮ್ಮ ಜಾಗದಲ್ಲಿ ತಾತ್ಕಾಲಿಕ ಶೆಡ್ಡನ್ನು ನಿರ್ಮಿಸಲು ಆದೇಶವನ್ನು ಸರ್ಕಾರದ ಅನುಮತಿಯನ್ನು ಪಡೆದು ಕೊಡಲಾಗಿತ್ತು. ಈ ರೀತಿ ಅರಣ್ಯ ಜಾಗವನ್ನು ೧೯೭೯ ರಿಂದ ೧೯೮೭ರ ಅವಧಿಯವರೆಗೆ ಕೊಡಲಾಗಿತ್ತು.

೧೯೮೪ ರಲ್ಲಿ ಶ್ರೀ ಎಂ. ಡಿ. ನಾಣಯ್ಯ, ಇವರು ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಂಖ್ಯೆ ೧೭೪೮-೮೭ ರ ಅನ್ವಯ ಹೀಗೆ ಇಲಾಖೆಯಿಂದ ಈ ರೀತಿ ತಾತ್ಕಾಲಿಕ ಶೆಡ್ಡನ್ನು ಗೇರು ಬೀಜ ಶೇಖರಣೆಗೆ ಕೊಡುವುದಕ್ಕೆ ತಡೆಯಾಜ್ಞೆ ತರಲಾಯಿತು.

ಈ ಸಂಬಂಧವಪ್ಪ ರಿಟ್ ಅನ್ನು ದಿನಾಂಕ ೪-೩-೮೫ರಂದು ಉಚ್ಚ ನ್ಯಾಯಾಲಯವು ತೆರವು ಮಾಡಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಡಿಕೇರಿ ಇವರಿಗೆ ದಿನಾಂಕ ೨೧-೯-೮೮ ರಲ್ಲಿ ಅರಣ್ಯ ಇಲಾಖೆಯಿಂದ ಗೇರು ಬೀಜ ಸಂಗ್ರಹಣೆಗೆ ಮಾವುಕಟ್ಟೆ ವಲಯದಲ್ಲಿ ತಾತ್ಕಾಲಿಕ ಶೆಡ್ಡನ್ನು ಕಟ್ಟಲು ಇಲಾಖಾ ನೀತಿಯಂತೆ ಗೇಣಿ ಬಾಡಿಗೆಯನ್ನು ವಸೂಲಿ ಮಾಡಿಕೊಡಲು ಆದೇಶಿಸಲಾಗಿತ್ತು.

ವಾಣಿಜ್ಯ ಮಂತ್ತು ತೆರಿಗೆ ಇಲಾಖೆಯ ಆಯುಕ್ತರಿಂದ ಬಂದ ವರದಿಯಂತೆ ೧೯೮೭ನೇ ಸಾಲಿನಲ್ಲಿ ಅಂದಾಜು ಸುಮಾರು ರೂ. ೪೫ ಲಕ್ಷಕ್ಕೂ ಮೇಲ್ಪಟ್ಟ ವಾಣಿಜ್ಯ ತೆರಿಗೆಯನ್ನು ವಸೂಲು ಮಾಡಲಾಗಿದೆಯೆಂದು ತಿಳಿದು ಬಂದಿರುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ಇವರು ಚೀಫ್ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ ೮-೨-೮೮ ರಂದು ಕಳುಹಿಸಿದ ತಂತಿ ಸಂದೇಶದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್, ವೀರಾಜಪೇಟೆ ಇವರು ಕೂಡ ಮಾಕಟ್ಟದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಗೇರು ಬೀಜದ ಶೇಖರಣೆಗೆ ತಾತ್ಕಾಲಿಕ ಶೆಡ್ಡನ್ನು ನಿರ್ಮಿಸಲು ಆದೇಶ ಕೊಟ್ಟಿರುತ್ತಾರೆ ಮತ್ತು ಇದನ್ನು ಕೂಡಲೇ ರದ್ದು ಪಡಿಸಬೇಕೆಂದು ನಮೂದಿಸಿದ ತಂತಿ ಪ್ರತಿಯನ್ನು ಈ ಕಛೇರಿಗೆ ಕಳುಹಿಸಿರುತ್ತಾರೆ ಅಲ್ಲದೇ, ಅರಣ್ಯ ಮತ್ತು ಲೋಕೋಪಯೋಗಿ ಇಲಾಖೆಯ ಮಧ್ಯೆ ಒಳಜಗಳ ಇಲ್ಲ.